NP – 017

# ನಾಲ್ಕನೇ ಸೆಮಿಸ್ಟರ್ ಬಿ.ಎ. ಪರೀಕ್ಷೆ, ಜುಲೈ/ಆಗಸ್ಟ್ 2024
## (NEP Scheme)
## ಕನ್ನಡ ಭಾಷಾ ಪತ್ಯ
## ಪತ್ರಿಕೆ – 4 : ಕಲಾ ಕನ್ನಡ – 4

ಸಮಯ : 2½ ಗಂಟೆಗಳು | ಗರಿಷ್ಠಾಂಕಗಳು : 60

I. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ಇನ್ನೂರು ಪದಗಳಿಗೆ ಮೀರದಂತೆ). **(2×10=20)**

1) ವರ್ತಮಾನಕಾಲ ಎಂದರೇನು ? ಇದೆಯೆ ? ವಿಶ್ಲೇಷಿಸಿ.

2) ''ಪ್ರೇಕ್ಷಕನಿಲ್ಲದ ನಾಟಕ ಪ್ರದರ್ಶನ ಊಹಾತೀತವಾದುದು'' ಈ ಮಾತನ್ನು ವಿವರಿಸಿ.

3) ಅಮೋಘಸಿದ್ಧನ ಜಾತ್ರೆಯಲ್ಲಿ ನಿರೂಪಕನನ್ನು ಶಿವಪ್ಪನು ಬಳಸಿಕೊಂಡ ಬಗ್ಗೆ ನಿಮ್ಮ ಅಭಿಪ್ರಾಯಗಳೇನು ? ವಿಶದಪಡಿಸಿ.

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ನೂರು ಪದಗಳಿಗೆ ಮೀರದಂತೆ). **(4×5=20)**

1) ಅಮೋಘಸಿದ್ಧನನ್ನು 'ಭಂಡಾರದ ಒಡೆಯ' ಎಂದು ಏಕೆ ಕರೆಯುತ್ತಾರೆ ?

2) ಮೇರಿ ಕ್ಯೂರಿಯ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

3) ಭಾಷೆಯ ನಾಲ್ಕು ಸಾಮರ್ಥ್ಯಗಳು ಯಾವುವು ?

4) ಕಾಲವನ್ನು ಕುರಿತ [illegible] ಅವರ ವಿಚಾರಗಳನ್ನು ಸಂಗ್ರಹಿಸಿ ಬರೆಯಿರಿ.

5) ತಾತನ ಕೊನೆಯ ಆಸೆ ಏನಾಗಿತ್ತು ?

6) ರಾಘವಾಂಕನು ಮಲ್ಲಿಕಾರ್ಜುನನ ಮಹಿಮೆಯನ್ನು ಹೇಗೆ ವರ್ಣಿಸಿದ್ದಾರೆ ?

III. ಕೆಳಕಂಡ ಕಂಡಿಕೆಯನ್ನು ಇಂಗ್ಲೀಷಿಗೆ ಭಾಷಾಂತರಿಸಿ. **(1×4=4)**

ನಾಟಕಕಾರನಿಗೂ, ಪ್ರೇಕ್ಷಕನಿಗೂ ನಟನ ಮೂಲಕ ಸಂಬಂಧವೇರ್ಪಟ್ಟು, ಸಹಾನುಭೂತಿಯಿಂದ ಒಬ್ಬನು ಇನ್ನೊಬ್ಬನ ಕುಂದುಕೊರತೆಗಳನ್ನು ಕಳೆದು ಮುನ್ನಡೆಯಿಸಿದರೆ ಅಂತಹ ರಂಗಭೂಮಿ, ದೀಪದಂತೆ ಬೆಳಗಿ ಸಮಾಜವನ್ನು ಆವರಿಸಿದ ಕತ್ತಲೆಯನ್ನು ನಿವಾರಿಸಲು ಸಮರ್ಥವಾಗುತ್ತದೆ. ನಾಟಕದ ಹಿರಿಮೆಯನ್ನು, ಕೊರತೆಯನ್ನು ಬೆರಳು ಮಾಡಿ ತೋರಿ ನಾಟಕಕಾರನನ್ನು, ನಟನನ್ನು ಪ್ರೇಕ್ಷಕನ ಒಲವನ್ನು ತಿದ್ದುವ ಸಲುವಾಗಿ ಪರಿಣತ ವಿಮರ್ಶಕ ಬರುತ್ತಾನೆ. ಆತನದು ಬುದ್ಧಿಯ ಪ್ರಪಂಚ. ಆದರೆ ಅನೇಕ ವೇಳೆ ಭಾವನೆಯ ಎದುರು ಬುದ್ಧಿ ಸೋತು ವಿಮರ್ಶಕನಿಗೆ ಕಂಡುಬಾರದ ತೃಪ್ತಿಯನ್ನು, ಮನೋರಂಜನೆಯನ್ನೂ, ಮಾರ್ಗದರ್ಶನವನ್ನು ಪ್ರೇಕ್ಷಕ ನಾಟಕದಲ್ಲಿ ಕಂಡುಕೊಳ್ಳುತ್ತಾನೆ.

ಪು.ತಿ.ನೋ.

IV. ಸೆಂಟ್ ಮೇರಿಸ್ ವಿದ್ಯಾಲಯದಲ್ಲಿ ಖಾಲಿಯಿರುವ ಕನ್ನಡ ಅಧ್ಯಾಪಕರ ಹುದ್ದೆಗೆ ಅರ್ಜಿ ಹಾಗೂ ಅಭ್ಯರ್ಥನ ಪತ್ರವನ್ನು ಸಿದ್ಧಪಡಿಸಿ. **(1×4=4)**

V. ಪುಲ್ವಾಮ ದಾಳಿಯನ್ನು ಕುರಿತಂತೆ ಕಾಲ್ಪನಿಕವಾಗಿ ಕವಿತೆ ಅಥವಾ ಕಥೆಯನ್ನು ಬರೆಯಿರಿ. (ಎಂಬತ್ತು ಪದಗಳಿಗೆ ಮೀರದಂತೆ). **(1×4=4)**

VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ ಸೂಕ್ತ ಶೀರ್ಷಿಕೆ ನೀಡಿ. **(1×4=4)**

ನಾನು ಸುಮಾರು ಒಂದೂವರೆ ಗಂಟೆಯಲ್ಲಿ ಈ ಲೇಖನ ಮುಗಿಸುತ್ತೇನೆ. ಇಂದು ಮಧ್ಯಾಹ್ನ ಎರಡು ಕಾಲಿಗೆ ಕುಳಿತು ಮೂರು ಮುಕ್ಕಾಲಿಗೆ ಮುಗಿಸುತ್ತಿದ್ದೇನೆ. ಇದರಲ್ಲಿ ಯಾವ ಪ್ಯಾರ ಎಷ್ಟು ಹೊತ್ತಿಗೆ ಮುಗಿಸಿದ್ದೇನೆನ್ನುವ ಪಟ್ಟಿಯನ್ನು ಇಡಬಹುದು. ಆದರೆ ಪದಗಳ ಹಂತಕ್ಕೆ ಹೋದಾಗ 'ಕಾಲ' ಜಾರುತ್ತದೆ. ಯಾವುದೇ ಒಂದು ಪದವನ್ನು ನಿರ್ದಿಷ್ಟ ನ್ಯಾನೋ ಸೆಕೆಂಡಿನ ಪರಿಧಿಗೆ ಒಳಪಡಿಸಲು ಯತ್ನಿಸುವಾಗ ಕರಾರುವಾಕ್ಕಾದ ಲೆಕ್ಕಾಚಾರ ಸಿಗುವುದಿಲ್ಲ.

VII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ (ಎಲ್ಲಾ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ). **(4×1=4)**

1) ನಾಟಕಕ್ಕೆ ಪುಣ್ಯಯಜ್ಞದ ಸ್ಥಾನ ನೀಡಿದವನು

   1) ಭರತ  2) ವಾಮನ

   3) ಕುಂತಕ  4) ಆನಂದವರ್ಧನ

2) 'ನೃತ್ಯಗೀತೆಗಳು ಕೀಳು ದರ್ಜೆಯವನ ಸೊತ್ತು' ಎಂದವರು

   1) ಕೌಟಿಲ್ಯ  2) ಚಂದ್ರಗುಪ್ತ ಮೌರ್ಯ

   3) ಬಿಂಬಸಾರ  4) ಅಶೋಕ

3) ಐನ್‌ಸ್ಟೈನ್ ಪ್ರತಿಪಾದಿಸಿದ ಸಿದ್ಧಾಂತ

   1) ಸಾಪೇಕ್ಷತಾ ಸಿದ್ಧಾಂತ  2) ಕ್ವಾಂಟಂ ಸಿದ್ಧಾಂತ

   3) ಗುರುತ್ವಾಕರ್ಷಣಾ ಸಿದ್ಧಾಂತ  4) ಯೋಗ ಸಿದ್ಧಾಂತ

4) ಆನಂದ ಬೆಂಗಳೂರಿನಲ್ಲಿ ಹುಡುಕಿಕೊಂಡಿದ್ದ ಕೆಲಸ

   1) ಸೆಕ್ಯೂರಿಟಿ ಗಾರ್ಡ್  2) ಸೆಕ್ಯೂರಿಟಿ ಸೂಪರ್‌ವೈಸರ್

   3) ಮ್ಯಾನೇಜರ್  4) ಕಾರ್ಪೆಂಟರ್

St. Francis de Sales LIBRARY Bangalore

---